**ದಿನಾಂಕ: 07.05.2022 ರಂದು ಬೆಳಿಗ್ಗೆ 11-00ಕ್ಕೆ ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ವಾರ್ಡ್-178 (ಸಾರಕ್ಕಿ) ನಡೆದ ಸಭೆಯ ನಡಾವಳಿಗಳು:**

## : ಚರ್ಚೆಯಾದ ವಿಷಯಗಳು :

1. ವಾರ್ಡ್-178ರಲ್ಲಿನ ಸಾರ್ವಜನಿಕರ ಎಲ್ಲಾ ರೀತಿಯ ಕುಂದುಕೊರತೆಗಳ ಬಗ್ಗೆ, ಅಭಿವೃದ್ಧಿ ಕಾಮಗಾರಿಗಳು ಹಾಗೂ ಘನತ್ಯಾಜ್ಯ ನಿರ್ವಹಣೆ ಮತ್ತು ಕೊವಿಡ್-19ರ ಬಗ್ಗೆ ಚರ್ಚಿಸುವ ಕುರಿತು.
2. ಅಧ್ಯಕ್ಷರ ಅಪ್ಪಣೆಯ ಮೇರೆಗೆ ಚರ್ಚಿಸುವಂತಹ ಇತರೆ ವಿಷಯಗಳು.

## : ಸಭೆಗೆ ಹಾಜರಾಗಿದ್ದವರ ವಿವರಗಳು :

| | |
|---|---|
| **ಅಧ್ಯಕ್ಷರು** | ನೋಡಲ್ ಅಧಿಕಾರಿ |
| **ಸದಸ್ಯ ಕಾರ್ಯದರ್ಶಿ** | ವಾರ್ಡ್ 178ರ ಸಹಾಯಕ ಅಭಿಯಂತರರು |
| **ಸದಸ್ಯರುಗಳು** | ಹಿರಿಯ /ಕಿರಿಯ ಆರೋಗ್ಯ ಪರಿವೀಕ್ಷಕರು |
| **ಸದಸ್ಯರುಗಳು** | ಬೆಸ್ಕಾಂ |
| **ಸದಸ್ಯರುಗಳು** | ತೋಟಗಾರಿಕಾ ಇಲಾಖೆಯ ಅಧಿಕಾರಿಗಳು |
| **ಸದಸ್ಯರುಗಳು** | ಅರಣ್ಯ ಇಲಾಖೆ ಅಧಿಕಾರಿಗಳು |
| **ಸದಸ್ಯರುಗಳು** | ಕಂದಾಯ ಪರಿವೀಕ್ಷಕರು |
| **ಸದಸ್ಯರುಗಳು** | ಬಿಡಬ್ಲ್ಯೂಎಸ್‌ಎಸ್‌ಬಿ ಅಧಿಕಾರಿಗಳು |
| **ಸದಸ್ಯರುಗಳು** | ಜೆ.ಪಿ.ನಗರ ಪೊಲೀಸ್ ಠಾಣಾ ಅಧಿಕಾರಿಗಳು |
| **ಸದಸ್ಯರುಗಳು** | ವಾರ್ಡ್ 178 ರ UPHC ನ ವೈದ್ಯರು |
| **ಸದಸ್ಯರುಗಳು** | ಜೆ.ಪಿ.ನಗರ 2ನೇ ಹಂತ ನಾಗರೀಕ ಕಲ್ಯಾಣ ಸಂಘದ ಸದಸ್ಯರು ಹಾಗೂ ನಾಗರೀಕರು |
| **ಸಾರ್ವಜನಿಕರು** | ಮಾರ್ಷಲ್ |

## :ನಡಾವಳಿಯ ವರದಿ:

➢ ಅಧ್ಯಕ್ಷರು ಮಾತನಾಡುತ್ತಾ ಹಿಂದಿನ ಸಭೆಯಲ್ಲಿ ಚರ್ಚೆಯಾದ ವಿಷಯಗಳ ಬಗ್ಗೆ ಅಧಿಕಾರಿಗಳು ಕೈಗೊಂಡ ಕ್ರಮಗಳ ಬಗ್ಗೆ ಚರ್ಚಿಸಲಾಯಿತು.

**ಸದರಿ ಸಭೆಯಲ್ಲಿ ಕಸ ವಿಲೇವಾರಿ ಸಮಸ್ಯೆ ಹಾಗೂ ಇತರೇ ದೂರುಗಳ ಬಗ್ಗೆ ಕುರಿತು ಈ ಕೆಳಕಂಡಂತೆ ಪ್ರಸ್ತಾಪಿಸಲಾಯಿತು.**

➢ 12 ರಿಂದ 17 ವರ್ಷದ ವಯಸ್ಸಿನ ಮಕ್ಕಳಿಗೆ ಕೋವಿಡ್-19 ವಾಕ್ಸಿನೇಷನ್‌ಅನ್ನು ಹಾಕುವ ಬಗ್ಗೆ ಚರ್ಚಿಸಲಾಯಿತು. ಸಂಬಂಧಪಟ್ಟ ವೈದ್ಯರು ಮೇ-15 ತಾರೀಖಿನ ನಂತರ ವಾಕ್ಸಿನೇಷನ್‌ಅನ್ನು ನೀಡಲಾಗುವುದೆಂದು ಸಭೆಯಲ್ಲಿ ತಿಳಿಸಿರುತ್ತಾರೆ.

➢ ಸಾರಕ್ಕಿ ವ್ಯಾಪ್ತಿಯಲ್ಲಿ ಓಪಿಡಿ ಹಾಗೂ ಪಿಹೆಚ್‌ಸಿ ಸೆಂಟರ್‌ಅನ್ನು ತೆರೆಯುವ ಬಗ್ಗೆ ಚರ್ಚಿಸಲಾಯಿತು. ಸಂಬಂಧಪಟ್ಟ ವೈದ್ಯರು ವಾರ್ಡ್ 178ಕ್ಕೆ ಮಂಜೂರಾತಿಯನ್ನು ನೀಡಿರುವುದಿಲ್ಲವೆಂದು ಸಭೇಯಲ್ಲಿ ತಿಳಿಸಿರುತ್ತಾರೆ. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಡಾ|| ಮಧುಸೂದನ್‌ರವರಿಗೆ ನೋಡಲ್ ಅಧಿಕಾರಿಯವರು ತಿಳಿಸಿರುತ್ತಾರೆ.

**ಪು.ತಿ.ನೋ.**

- ಇತ್ತೀಚಿನ ದಿನಗಳಲ್ಲಿ ಬೇಸಿಗೆಯಲ್ಲೂ ಸುರಿಯುತ್ತಿರುವ ಮಳೆಯಿಂದಾಗಿ ಡೆಂಗ್ಯೂ ಹಾಗೂ ಮಲೇರಿಯಾ ಕಾಯಿಲೆಯು ಹೆಚ್ಚುತ್ತಿರುವ ಬಗ್ಗೆ ಸಭೆಯಲ್ಲಿ ಸಾರ್ವಜನಿಕರು ಕಳವಳ ವ್ಯಕ್ತಪಡಿಸಿದರು. ಈ ಬಗ್ಗೆ ನೋಡಲ್ ಅಧಿಕಾರಿಯವರು ಆರೋಗ್ಯ ವೈದ್ಯಾಧಿಕಾರಿ ಹಾಗೂ ಸಿಬ್ಬಂದಿಗಳಿಗೆ, ಈ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು.

- ವಾರ್ಡ್ 178 ವ್ಯಾಪ್ತಿಗೆ ಬರುವ ಸಾರ್ವಜನಿಕ ಪಾರ್ಕ್‌ಗಳನ್ನು ಬೆಳಿಗ್ಗೆ 10.00 ಗಂಟೆಯ ನಂತರವೂ ತೆರೆಯಲು ಅವಕಾಶವನ್ನು ನೀಡಬೇಕೆಂದು ಅಸೋಷಿಯೇಷನ್ಸ್ ವತಿಯಿಂದ ಕೇಳಿಕೊಂಡಿರುತ್ತಾರೆ. ಹಾಗೂ ತೋಟಗಾರಿಕೆ ಅಧಿಕಾರಿಗಳಿಂದ ಪಾರ್ಕ್‌ಗಳ ಪರಿವೀಕ್ಷಣೆ ಹಾಗೂ ಕೈಗೊಳ್ಳಬೇಕಾದ ಅಭಿವೃದ್ಧಿ ಕಾರ್ಯಗಳ ಬಗ್ಗೆ ಕ್ರಮ ಕೈಗೊಳ್ಳುವ ಕುರಿತು.
  **ಕ್ರಮ : ತೋಟಗಾರಿಕಾ ಇಲಾಖೆ (ದಕ್ಷಿಣ)**

- 23ನೇ ಮುಖ್ಯರಸ್ತೆಯಲ್ಲಿ ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸುವ ಬಗ್ಗೆ ಚರ್ಚಿಸಲಾಯಿತು. **ಕ್ರಮ:- ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಜೆ.ಪಿ.ನಗರ ಉಪವಿಭಾಗ**

- 12ನೇ ಅಡ್ಡರಸ್ತೆ, 15ನೇ ಮುಖ್ಯರಸ್ತೆ, 17ನೇಮುಖ್ಯರಸ್ತೆ, 21ನೇ ಮತ್ತು 22ನೇ ಮುಖ್ಯರಸ್ತೆಗಳಲ್ಲಿರುವ ವಿದ್ಯುತ್ ಕಂಬಗಳಿಗೆ ಡಿ.ಪಿ. ಸ್ವಿಚ್‌ಗಳನ್ನು ಅಳವಡಿಸುವ ಬಗ್ಗೆ ಚರ್ಚಿಸಲಾಯಿತು. **ಕ್ರಮ :- ಬೀದಿ ದೀಪಗಳ ನಿರ್ವಹಣೆ ಕಛೇರಿ, ಬಿಬಿಎಂಪಿ (ದಕ್ಷಿಣ)**

- 15ನೇ ಅಡ್ಡರಸ್ತೆಯ ಜೆ.ಪಿ.ನಗರದಲ್ಲಿ ವಾಹನ ಸಂಚಾರ ದಟ್ಟಣೆಯಿದ್ದು, Road humps ಅಳವಡಿಸುವಂತೆ ಚರ್ಚಿಸಲಾಯಿತು. **ಕ್ರಮ :- ಮೇಜರ್ ರೋಡ್**

- ಕೊನೆಯದಾಗಿ ಮಾನ್ಯ ಅಧ್ಯಕ್ಷರು ಸಭೆಗೆ ಹಾಜರಾದ ಎಲ್ಲಾ ಸದಸ್ಯರು ಮತ್ತು ಸಾರ್ವಜನಿಕರಿಗೆ ವಂದನೆಯನ್ನು ತಿಳಿಸುತ್ತಾ ಇನ್ನು ಮುಂದೆ ಪ್ರತಿ ತಿಂಗಳು ಮೊದಲ ಶನಿವಾರ ಹಾಗೂ ಮೂರನೇ ಶನಿವಾರ ಬೆಳಿಗ್ಗೆ 10.30 ಕ್ಕೆ ಇದೇ ರೀತಿಯಾಗಿ ಮಾಸಿಕ 2 ಬಾರಿ ವಾರ್ಡ್ ಸಮಿತಿ ಸಭೆ ನಡೆಯುವುದಾಗಿ ತಿಳಿಸಿ ಮುಂದಿನ ಸಭೆಗಳಿಗೆ ಈ ವಾರ್ಡಿನ ವ್ಯಾಪ್ತಿಗೆ ಬರುವ ಎಲ್ಲಾ ಇಲಾಖೆಗಳ ಅಧಿಕಾರಿಗಳನ್ನು ಸದರಿ ಸಭೆಗೆ ಮಾಹಿತಿಗಳೊಂದಿಗೆ ಹಾಜರಾಗುವಂತೆ ಕೋರಿ ಪತ್ರ ಬರೆಯಲು ಸದಸ್ಯ ಕಾರ್ಯದರ್ಶಿ ರವರಿಗೆ ಸೂಚಿಸಿದರು. ಹಾಗೂ ಗೈರು ಹಾಜರಾಗಿರುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲು ಮಾನ್ಯ ಆಯುಕ್ತರವರಿಗೆ ಸೂಚಿಸಲಾಗುವುದೆಂದು ತಿಳಿಸಿದರು.

- ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಇಂಜಿನಿಯರ್‌ರಾದ ಶ್ರೀ ಚಂದ್ರಶೇಖರ್, ವಾರ್ಡ್ 178 ಸಾರಕ್ಕಿ, ಸಭೆಗೆ ಹಾಜರಾದ ಎಲ್ಲಾ ಸದಸ್ಯರಿಗೂ ಹಾಗೂ ಅಧಿಕಾರಿಗಳು/ನೌಕರರಿಗೂ ವಂದನಾರ್ಪಣೆ ಸಲ್ಲಿಸುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ಸದಸ್ಯ ಕಾರ್ಯದರ್ಶಿ**
**ಹಾಗೂ ವಾರ್ಡ್178 ರ ಸಹಾಯಕ ಅಭಿಯಂತರರು**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**